# ಬಿಬ್ ನೆಕ್ಲೇಸ್

**ಕೃತಕ ಒಡವೆಯಾದರೂ ಉಡುಪಿನ ಮೇಲೆ ತೊಟ್ಟರೆ ಸಖತ್ ಲುಕ್ ಕೊಡುವ ಬಿಬ್ ನೆಕ್ಲೇಸ್‌ಗಳು ಫ್ಯಾಷನ್‌ಪ್ರಿಯರ ಕಣ್ಣುಗಳು ಅರಳುವಂತೆ ಮಾಡಿ ಟ್ರೆಂಡ್ ಸೃಷ್ಟಿಸಿದೆ.**

**■ ಆಶಾ ಕುಲಕರ್ಣಿ**



ಆಭರಣವೆಂದರೆ ಯಾರಿಗೆ ಇಷ್ಟವಿಲ್ಲ ಹೇಳಿ. ಬಿಬ್ ನೆಕ್ಲೇಸ್ ಫ್ಯಾಷನ್ ಪ್ರಪಂಚದಲ್ಲಿ ಈಗೀಗ ಸಖತ್ ಸದ್ದು ಮಾಡುತ್ತಿದೆ. ಅಷ್ಟಕ್ಕೂ ಬಿಬ್ ನೆಕ್ಲೇಸ್ ಉದಯಿಸಿದ್ದು ಹೇಗೆ ಗೊತ್ತಾ? ಪುಟ್ಟ ಮಕ್ಕಳಿಗೆ ಊಟ ಮಾಡಿಸುವಾಗ ಬಟ್ಟೆ ಮೇಲೆ ಚೆಲ್ಲಿ ಕೊಳೆಯಾಗದಿರಲಿ ಎಂದು ಕತ್ತಿನ ಸುತ್ತಲೂ ಕಟ್ಟುವ ಬಟ್ಟೆಯೇ ಇದೀಗ ಬಿಬ್ ನೆಕ್ಲೇಸ್ ಅವತಾರ ತಾಳಿದೆ. ಈಗ ಈ ತರಹದ ಬಟ್ಟೆಗಳಿಂದ ತಯಾರಿಸಿದ ಫ್ಲೋರಲ್ ಡಿಸೈನ್‌ನ ಬಿಬ್ ನೆಕ್ಲೇಸ್ ಫ್ಯಾಷನ್ ಆಗಿದೆ.

ಸಾಮಾನ್ಯವಾಗಿ ಮದುವೆ, ಹಬ್ಬ ಇನ್ನಿತರ ಸಮಾರಂಭಕ್ಕೆ ಸಾಂಪ್ರದಾಯಿಕವಾಗಿ ಧರಿಸುತ್ತಿದ್ದ ಚಿನ್ನದ ನೆಕ್ಲೇಸ್‌ಗಳಿಗಿಂತ ಭಿನ್ನವಾಗಿರುವ ಬಿಬ್ ನೆಕ್ಲೇಸ್ ಮಾಡರ್ನ್ ಲೈಫ್‌ಸ್ಟೈಲ್‌ಗೆ ಹೇಳಿ ಮಾಡಿಸಿದಂತಿದೆ. ಹೆಸರಿಗೆ ತಕ್ಕಂತೆ ಇದರ ಲುಕ್ ಕೂಡ ಗ್ಲಾಮರಸ್ ಆಗಿದೆ.

### ಬೀಬ್ ನೆಕ್ಲೇಸ್ ವೈವಿಧ್ಯ

ಬಟ್ಟೆಯಿಂದ ತಯಾರಿಸಲಾದ ಈ ಬಿಬ್ ನೆಕ್ಲೇಸ್‌ಗಳ ಮೇಲೆ ಹ್ಯಾಂಡ್‌ವರ್ಕ್, ಎಂಬ್ರಾಯ್ಡರಿ ವರ್ಕ್, ಲೇಸ್ ವರ್ಕ್, ಹೂವಿನ ಡಿಸೈನ್ಸ್, ಮುತ್ತು, ಹರಳು, ಕುಂದನ್... ಮುಂತಾದವುಗಳಿಂದ ಕುಸುರಿ ಕೆಲಸ ಮಾಡಿ ಇನ್ನಷ್ಟು ಆಕರ್ಷಕಗೊಳಿಸಲಾಗುತ್ತದೆ. ನುರಿತ ವಿನ್ಯಾಸಕಾರರಿಂದ ತಯಾರಿಸಲಾದ ಈ ಬೀಬ್ ನೆಕ್ಲೇಸ್‌ಗಳಲ್ಲಿ ಹೂವಿನ ಡಿಸೈನ್‌ಗಳನ್ನು ಅತ್ಯಂತ ನಾಜೂಕಾಗಿ ತಯಾರಿಸಲಾಗುತ್ತದೆ. ಈ ಬಿಬ್ ನೆಕ್ಲೇಸ್‌ಗಳು ಕಲರ್‌ಫುಲ್ ಆಗಿರುವುದರಿಂದ ಸಭೆ, ಸಮಾರಂಭಗಳಿಗೆ ಧರಿಸಿ ಹೋದರೆ ಎಲ್ಲರ ಕಣ್ಣು ಇದರತ್ತಲೇ ನೆಟ್ಟಿರುತ್ತದೆ.

ಕತ್ತಿನಲ್ಲಿ ಹೂವಿನ ಚಿತ್ತಾರ ಬಿಡಿಸಿದಂತೆ ಕಾಣುವ ಈ ಬಿಬ್ ನೆಕ್ಲೇಸ್‌ಗಳು ಕೊರಳಿನ ಅಂದ ಹೆಚ್ಚಿಸುವುದು ಮಾತ್ರವಲ್ಲ, ನೀವು ಧರಿಸುವ ಉಡುಪಿಗೂ ಹೊಸ ಲುಕ್ ಅನ್ನೂ ನೀಡುತ್ತದೆ. ಎಲ್ಲ ರೀತಿಯ ಉಡುಪುಗಳಿಗೂ ಇದನ್ನು ಧರಿಸಬಹುದು. ಮಿಕ್ಸ್ ಅಂಡ್ ಮ್ಯಾಚ್ ಕೂಡ ಮಾಡಿಕೊಳ್ಳಬಹುದು. ■

### ಯಾವಾಗ ಧರಿಸುವುದು ಸೂಕ್ತ?

- ಬಿಬ್ ನೆಕ್ಲೇಸ್ ಧರಿಸುವುದಾದರೆ ನಿಮ್ಮ ಡ್ರೆಸ್ ಸಿಂಪಲ್ ಆಗಿರಲಿ. ನೆಕ್ಲೇಸ್ ಗ್ರ್ಯಾಂಡ್ ಆಗಿರುವ ಕಾರಣ ಡ್ರೆಸ್ ಕೂಡ ಗ್ರ್ಯಾಂಡ್ ಆಗಿದ್ದರೆ ನೆಕ್ಲೇಸ್ ಲುಕ್ ಹೊರಟುಹೋಗುತ್ತದೆ.
- ಉದ್ಯೋಗಸ್ಥ ಮಹಿಳೆಯರು ಕ್ಯಾಶುವಲ್ ಅಕೇಶನ್‌ಗಳಿಗೆ ಹೋಗುವಾಗ ಚಿಕ್ಕದಾದ ನೆಕ್ಲೇಸ್ ಧರಿಸುವುದು ಉತ್ತಮ. ಪಾರ್ಟಿಗೆ ಹೋಗುವಾಗ ಮಾತ್ರ ದೊಡ್ಡ ಗಾತ್ರದ ನೆಕ್ಲೇಸ್ ಧರಿಸಬೇಕು.
- ಬಿಬ್ ನೆಕ್ಲೇಸ್ ಧರಿಸಿದಾಗ ಅದು ನಿಮ್ಮ ಕತ್ತಿನ ಸುತ್ತ ಸರಿಯಾಗಿ ಫಿಟ್ ಆಗಿರುವಂತೆ ನೋಡಿಕೊಳ್ಳುವುದು ಉತ್ತಮ.
- ನೆಕ್ಲೇಸ್ ಹಿಂದುಗಡೆಯಿರುವ ರಿಬ್ಬನ್ ಸರಿಯಾಗಿ ಕಟ್ಟಿಕೊಳ್ಳಬೇಕು. ಇಲ್ಲದಿದ್ದರೆ ಅದು ಬಿದ್ದುಹೋಗುವ ಸಂಭವ ಇದೆ.

